ಶ್ರೀಗಳು ಎಂದಿನಂತೆ ಮಠದ ಹೂದೋಟವನ್ನೆಲ್ಲ ಸುತ್ತಿ, ಗಾಳಿ ಸೇವಿಸಿ ಲಗುಬಗೆಯಲ್ಲಿ ಮಠಕ್ಕೆ ಹಿಂದಿರುಗಿದರು. ರತ್ನಳ ಇರುವಿಕೆ ತಕ್ಷಣಕ್ಕೆ ಕಂಡುಬರದಿದ್ದಾಗ ಗಾಬರಿಯಾದವರಂತೆ ಚಡಪಡಿಸಿದರು. ಆದರೆ, ಮೆಲ್ಲಗೆ ಮಠದ ಇನ್ನೊಂದು ಬದಿಯಿಂದ ಬರುತ್ತಿದ್ದ ಪೊರಕೆಯ ಶಬ್ದ ಶ್ರೀಗಳು ಅತ್ತ ಪಾದಬೆಳಸುವಂತೆ ಮಾಡಿತ್ತು. ಶ್ರೀಗಳು ಈಗ ಹೊರಟಿರುವುದು ಸಾಮಾನ್ಯವಾಗಿ ತಾವು ಎಂದೂ ಅಲ್ಲಿಗೆ ಹೋಗದ ಸಾರ್ವಜನಿಕರಿಗೆಂದು ಇದ್ದ ಶೌಚಾಲಯ. ಇದು ಮಠದ ದಾಸೋಹಭವನಕ್ಕೆ ಹೊಂದಿಕೊಂಡಂತಿದ್ದು ಮೇಲ್ಛಾವಣಿ ಹೊಂದಿದ್ದು ಖಾಸಗಿಯಂತೆಯೇ ಇತ್ತು. ಶ್ರೀಗಳ ಖಾಸಗಿ ಕೊಠಡಿಯಲ್ಲೆ ಶೌಚಾಲಯ ಇರುವುದರಿಂದ ಅವರು ಅದನ್ನಲ್ಲದೆ ಬೇರೆಯದ್ದನ್ನ ಬಳಸುತ್ತಿರಲಿಲ್ಲ. ಇಂದು ರತ್ನಳನ್ನು ನೆನೆದು ಸಾರ್ವಜನಿಕ ಶೌಚಾಲಯದ ಕಡೆಗೆ ಪಾದ ಬೆಳಸಿಯೇ ಬಿಟ್ಟರು. ಯಾರೂ ಇಲ್ಲದ ನಿರ್ಜನ ಶೌಚಾಲಯದೊಳಗೆ ಇದ್ದಕ್ಕಿದ್ದಂತೆ ಪ್ರತ್ಯಕ್ಷರಾದ ಕಾವಿಧಾರಿ ಶ್ರೀಗಳನ್ನು ಕಂಡು ರತ್ನಳಿಗೆ ತಬ್ಬಿಬ್ಬಾಯಿತು. ಸೀರೆಯನ್ನು ಮೊಣಕಾಲ ವರಗೆ ಎತ್ತಿ ಕಟ್ಟಿಕೊಂಡು ಗುಡಿಸುತ್ತಿದ್ದ ರತ್ನ ತಕ್ಷಣ ಅದನ್ನು ಕೆಳಕ್ಕಿಳಿಸಲು ಮುಂದಾದಳು. ಶ್ರೀಗಳು, 'ರತ್ನ ನೀವು ಇಲ್ಲಿದಿರ, ಮಾಡಿ ಮಾಡಿ' ಎಂದೇಳಿ ಆಕಸ್ಮಿಕವೆಂಬಂತೆ ತಕ್ಷಣ ಆಚೆ ನಡೆದರು. ರತ್ನಮ್ಮ ಅದನ್ನ ನಂಬಿ ಮತ್ತೆ ಕಾಯಕ ನಿರತಳಾದಳು. ಆಚೆ ಬಂದ ಶ್ರೀಗಳ ಪಾದಗಳು ಎಲ್ಲಿಯೂ ನಿಲ್ಲದಾದವು. ಮನದಲ್ಲೆ ಮತ್ತೊಂದು ಬಗೆಯ ಸಂಕಲ್ಪ ಮಾಡಿದವರಂತೆ ಹಿಂದಿರುಗಿ ಬಂದು ಮತ್ತೆ ಶೌಚಾಲಯ ಪ್ರವೇಶಿಸಿಬಿಟ್ಟರು. ಶ್ರೀಗಳು ಅದೇ ಜಾಗಕ್ಕೆ ಮತ್ತೊಮ್ಮೆ ಬಂದದ್ದನ್ನು ಕಂಡ ರತ್ನಮ್ಮ ಗಾಬರಿ ಬಿದ್ದು ಆಚೆ ನಡೆಯಲೆತ್ನಿಸಿದಳು. ಒಳನುಗ್ಗಿದ ಶ್ರೀಗಳು, 'ಇಲ್ಲೆ ನಿಲ್ಲಿ ರತ್ನ' ಎಂದು ಸ್ಟಾಂಡಿಂಗ್ ಶೌಚಾಲಯದ ಬಳಿ ಹೋಗಿ ನಿಂತು ತಮ್ಮ ಕಾವಿಯನ್ನು ಸರಿಸಿ ರತ್ನಳನ್ನೆ ನೋಡುತ್ತ ಉಚ್ಚೆ ಹುಯ್ಯ ತೊಡಗಿದರು. ಬಾಗಿಲ ಬಳಿ ತಲೆತಗ್ಗಿಸಿ ನಿಂತಿದ್ದ ರತ್ನಮ್ಮಳ ತಲೆ ಸವರಿ, 'ಓಂ ಶಾಂತಿ' ಎಂದು ಹೇಳಿ ಅಲ್ಲಿಂದ ಕಾಲ್ಕಿತ್ತು ಬಿಟ್ಟರು. ಮಾರನೆ ಬೆಳಗ್ಗೆ ರತ್ನಮ್ಮ ಬರುವುದು ಕೊನೆಯಾಗಿ ತಾಯಿ ಲಿಂಗಮ್ಮಳೆ ಮತ್ತೆ ಮಠಕ್ಕೆ ಬರತೊಡಗಿದಳು. ಸ್ವಾಮೀಜಿಗಳು ರತ್ನಮ್ಮ ತನ್ನ ತಾಯಿಗೆ ಏನಾದರೂ ಸುಳಿವು ಕೊಟ್ಟಿರಬಹುದೇ ಎಂದು ಲಿಂಗಮ್ಮನ ಮುಖದಲ್ಲಿ ಹುಡುಕಲು ಪ್ರಯತ್ನಿಸಿದರು. ಏನೂ ಸಿಗದಿದ್ದಾಗ ಮಾಮೂಲಿ ಧೈರ್ಯತಂದುಕೊಂಡರು.

ಇಂತೆಲ್ಲ ಪರಿಪಾಟಲು ಬಿದ್ದರೂ ಏನೂ ಸುಖವಾಗದೆ ಇದ್ದಾಗ ಶ್ರೀಗಳು ತಮ್ಮ ಹಾಗೂ ತಮ್ಮ ಕಾಯಕದ ಕುರಿತೇ ಕೆಲವೊಮ್ಮೆ ಪ್ರಶ್ನಿಸಿಕೊಳ್ಳುತ್ತ, ಪರೀಕ್ಷೆಗೊಳಪಡಿಸಿಕೊಂಡು ಲೋಕದ ಗ್ರಹಿಕೆಯನ್ನು ಹುಡುಕಲೆತ್ನಿಸುತ್ತಿದ್ದರು. ತಾವು ಬರೆಯುತ್ತಿದ್ದ ಪತ್ರಿಕೆಯಲ್ಲಿನ ಕಾಲಂನಲ್ಲೂ ಸಹ ಇಂತವುಗಳನ್ನೇ ಹೆಚ್ಚೆಚ್ಚು ಚರ್ಚಿಸುತ್ತಿದ್ದರು. ಅವರ ಈ ಬಗೆಯ ಬರಹಗಳಿಗೆ ಮಾರುಹೋಗಿದ್ದ ಯುವಜನತೆ ಇವರನ್ನೊಬ್ಬ, 'ಅಸಾಧಾರಣ ಸಾಧಕ, ಕಿರಿಯ ವಯಸ್ಸಿನಲ್ಲೆ ಅಗಾಧವಾದುದನ್ನ ಸಂಪಾದಿಸಿಕೊಂಡಿರುವ ಜ್ಞಾನಿ' ಇತ್ಯಾದಿಯಾಗಿ ಮಾತಾಡಿಕೊಳ್ಳುತ್ತಿದ್ದರು. ಅವರ ಒಂದು ಅಂಕಣವನ್ನು ಓದಿದ ಹಳೆಯ ಮಿತ್ರ ಹುಬ್ಬಳ್ಳಿಯ ಶಾಂತ ಸ್ವಾಮಿಗಳು ಮಾತಾಡಿಸಲು ಒಂದು ಮುಂಜಾವು ಕರೆಮಾಡಿದ್ದರು. 'ನಿಮ್ಮ ಬರಹದ ಒಟ್ಟಾರೆ ಆಶಯ ನಮಗೆ ತಿಳಿದುದಾಗಿದೆ, ನಿಮ್ಮ ಒಳ ತುಮುಲಗಳು ಯಾವ ಬಗೆಯವು, ಇದರ ಮುಕ್ತಿ ಹೇಗೆ ಎಂಬುದೆಲ್ಲವೂ ಶಿವಾರ್ಥವಾಗಿವೆ. ಆದ್ದರಿಂದ ನೀವು ಬೇಗನೆ ಕನ್ನಡ ಟೈಪಿಂಗ್‌ನ ನಾಡಿ ಮಿಡಿತವರಿತ ಭಕ್ತೆಯನ್ನು ನೇಮಿಸಿಕೊಳ್ಳಿ. ಇದರಲ್ಲಿ ನಿಮ್ಮ ಹಾಗೂ ನಿಮ್ಮ ಮಠದ ಕ್ಷೇಮಾಭಿವೃದ್ಧಿ ಇನ್ನು ಉನ್ನತಮಟ್ಟಕ್ಕೋಗುತ್ತದೆ' ಎಂದು ಸಕಾಲಿಕ ಸಲಹೆ ನೀಡಿದ್ದರು.

ಮಿತ್ರ ಸ್ವಾಮಿಗಳು ನೀಡಿದ ಸಲಹೆಯನ್ನು ಕಣ್ಣಿಗೊತ್ತಿಕೊಂಡ ಕಿರಿಯ ಶ್ರೀಗಳು ಅದಕ್ಕಾಗಿ ಒಂದೆರೆಡು ವಾರ ಕಾಲಾವಕಾಶ ತೆಗೆದುಕೊಂಡು, ಕೊನೆಗೂ ಪತ್ರಿಕೆಗೆ ಜಾಹೀರಾತು ನೀಡಿದ್ದರು.